ಹುದ್ದೆಗಳನ್ನು ೧೯೮೭ರಲ್ಲಿಯೇ ನಿಯಮಾವಳಿ ಪ್ರಕಾರ, ರೋಸ್ಟರ್ ಪದ್ಧತಿಯನ್ನು ಅನುಸರಿಸಿ, ಭರ್ತಿ ಮಾಡಲಾಗಿದೆ ಹಾಗೂ ಯಾವುದೇ ಬ್ಯಾಕ್‌ಲಾಗ್ ಹುದ್ದೆಗಳು ಈ ವೃಂದದಲ್ಲಿ ಖಾಲಿಯಿರುವುದಿಲ್ಲ. ಈ ಸಂಬಂಧ ಯಾವುದೇ ಅಧಿಕಾರಿಗಳು ಉದ್ದೇಶ ಪೂರ್ವಕವಾಗಿ ಪರಿಶಿಷ್ಟ ಪಂಗಡಗಳಿಗೆ ಮೀಸಲಿಟ್ಟ ಹುದ್ದೆಗಳನ್ನು ಭರ್ತಿ ಮಾಡಲು ವಿಳಂಬ ಮಾಡಿರುವುದಿಲ್ಲ.

GRANT OF LAND IN SURVEY NO. 148 OF KANNAMANGALA, CHANNAPATNA TALUK.

Sri Sadat Ali Khan (Channapatna):- Madam, The Hon'ble Minister for Revenue and RDPR will be pleased to note that in survey No. 148 of Kannamangala, Channapatna Taluk, Mr. V. Ramu, Ex-serviceman having 4 acres and adjoining 4 acres of land and the other one Sri D. Komar Gowda now working in BDA as A.E. having a land of 4 acres in S. No. 149, subsequently, the extent of land and survey No. has been changed to No. 255 and extent of land changed to 4 acres i.e. 9 acres 36 guntas. What is the norms to change the Survey Numbers and the conversion of lands from Acres to Hectares in rural areas details may be furnished, what is the extent of land in Survey Number 148 and 149, and who are the beneficaries. Whether it is a fact that injustice has been done by the Revenue Department While grant of land in the above survey number. If so, what action has been taken by the Government in this behalf.

ಶ್ರೀ ಜಿ ಪುಟ್ಟಸ್ವಾಮಿಗೌಡ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):- ಮಾನ್ಯ ಅಧ್ಯಕ್ಷರೇ, ಮಾನ್ಯ ಕಂದಾಯ ಮಂತ್ರಿಗಳ ಪರವಾಗಿ ಈ ಹೇಳಿಕೆಯನ್ನು ಕೊಡಬಯಸುತ್ತೇನೆ:-

ಚನ್ನಪಟ್ಟಣ ತಾಲೂಕು ಕನ್ನಮಂಗಲ ಗ್ರಾಮದ ಸ. ನ. ೧೪೮ ಮತ್ತು ೧೪೯ರಲ್ಲಿ ೪.೦೦ ಎಕರೆ ಮತ್ತು ೯.೩೬ (ಎ. ಗುಂ) ಜಮೀನನ್ನು ಕ್ರಮವಾಗಿ ಶ್ರೀ ವಿ. ರಾಮು ಮತ್ತು ಕೂಮಾರಿ ಗೌಡರಿಗೆ ಮಂಜೂರು ಮಾಡಲಾಗಿದೆ. ಸದರಿ ಜಮೀನಿನ ಆಳತೆ ಕಾಲದಲ್ಲಿ ಕೊಮಾರಿ ಗೌಡರವರಿಗೆ ಮಂಜೂರಿಯಾಗಿರುವ ಜಮೀನಿನ ಸ್ಥಳ ಬದಲಾವಣೆಯಾಗಿರುವುದನ್ನು ಭೂ ಮಾಪನ ಇಲಾಖಾ ಸಹಾಯಕ ನಿರ್ದೇಶಕರು ಗಮನಿಸಿದರು. ಆದರಂತೆ ಕೊಮಾರಿಗೌಡರಿಗೆ ಮಂಜೂರಿಯಾಗಿರುವ ಜಮೀನಿನ ಸ್ಥಳ ಬದಲಾವಣೆ ಸ. ನಂ. ೨೫೫ ೧೪೯ ಎಂದು ಬದಲಾಯಿಸಿ ತಹಸೀಲ್ದಾರ್‌ರವರು ಆದೇಶ ಹೊರಡಿಸಿರುತ್ತಾರೆ. ಕೊಮಾರಿ ಗೌಡರಿಗೆ ಮಂಜೂರ್ ಆಗಿರುವ ಜಮೀನಿನ ಆಳತೆ ಕೆಲಸ ಪೂರ್ಣಗೊಳಿಸಿ ಹೊಸ ನಂಬರ್ ೨೫೫ ಎಂದು ಕೊಡಲಾಗಿದೆ. ತಹಸೀಲ್ದಾರ್‌ರವರು ಮಾಡಿರುವ ಸ್ಥಳ ಬದಲಾವಣೆ ಸರ್ವ ನಂಬರಿನ ತಿದ್ದುಪಡಿ ಆದೇಶದ ವಿರುದ್ಧ ಶ್ರೀ ವಿ. ರಾಮುರವರು ರಾಮನಗರಂ

ಉಪ ವಿಭಾಗಾಧಿಕಾರಿಗಳ ಸಮ್ಮುಖದಲ್ಲಿ ಮೇಲ್ಮನವಿ ಸಲ್ಲಿಸಿದ್ದು, ಉಪವಿಭಾಗಾಧಿಕಾರಿಗಳು ತಹಸೀಲ್ದಾರರ ಆದೇಶವನ್ನು ರದ್ದುಗೊಳಿಸಿ ಆದೇಶ ನೀಡಿರುತ್ತಾರೆ. ತದನಂತರ, ಶ್ರೀ ಕೊಮಾರಿಗೌಡರು ಉಪವಿಭಾಗಾಧಿಕಾರಿಗಳ ಆದೇಶದ ವಿರುದ್ಧ ಬೆಂಗಳೂರು ಗ್ರಾಮಾಂತರ ಜಿಲ್ಲಾಧಿಕಾರಿಗಳ ಸಮ್ಮುಖದಲ್ಲಿ ಮೇಲ್ಮನವಿ ಸಲ್ಲಿಸಿದ್ದು ಜಿಲ್ಲಾಧಿಕಾರಿಗಳು ಉಪವಿಭಾಗಾಧಿಕಾರಿಗಳ ಆದೇಶವನ್ನು ರದ್ದುಗೊಳಿಸಿ ತಹಸೀಲ್ದಾರ್‌ರವರು ಸ್ಥಳ ಬದಲಾವಣೆ ಬಗ್ಗೆ ಸರ್ವೆ ನಂಬರನ್ನು ತಿದ್ದುಪಡಿ ಮಾಡಿ ನೀಡಿರುವ ಆದೇಶವನ್ನು ಎತ್ತಿ ಹಿಡಿದು ಆದೇಶ ಮಾಡಿರುತ್ತಾರೆ. ಹೀಗಾಗಿ ಕೊಮಾರಿ ಗೌಡರಿಗೆ ಮಂಜೂರಾಗಿರುವ ಜಮೀನು ೯ ಎಕರೆ ೩೬ ಗುಂಟೆ ಇದಕ್ಕೆ ಸಮನಾಗಿ ೪ ಹೆಕ್ಟೇರ್ ಆಗಿರುತ್ತದೆ. ಜಮೀನು ಮಂಜೂರಿ ನಂತರ ಪಕ್ಕ ಪೋಡಿ ಕಾಲದಲ್ಲಿ ಸರ್ವೆ ಇಲಾಖೆಯವರು ಮಂಜೂರಿ ಜಮೀನಿಗೆ ಹೊಸ ಸರ್ವೆ ನಂಬರನ್ನು ಕೊಟ್ಟು ದುರಸ್ತಿ ಮಾಡುವ ಪದ್ಧತಿ ಜಾರಿಯಲ್ಲಿರುತ್ತದೆ. ಆದರಂತೆ, ಹೊಸ ಸರ್ವೆ ನಂಬರನ್ನು ಆಕಾರಬಂದು ಮತ್ತು ಗ್ರಾಮ ಲೆಕ್ಕಗಳಲ್ಲಿ ದಾಖಲೆ ಮಾಡಲಾಗುವುದು. ಜಮೀನಿನ ವಿಕರೆಯನ್ನು ಹೆಕ್ಟೇರ್‌ಗಳಿಗೆ ನಿಗದಿತವಾದ ಕೋಷ್ಟಕದಂತೆ ಪರಿವರ್ತಿಸಲಾಗುವುದು. ಕನ್ನಮಂಗಲ ಗ್ರಾಮದ ಸ. ನಂ. ೧೪೮ ಮತ್ತು ೧೪೯ರಲ್ಲಿ ಕ್ರಮವಾಗಿ ೪೭೦-೦೮ (ಎ. ಗುಂ) ಮತ್ತು ೫೯೮-೩೭ (ಎ. ಗುಂ) ವಿಸ್ತೀರ್ಣವಿರುತ್ತದೆ. ಈ ಪೈಕಿ ಸ. ನಂ. ೧೪೮ರಲ್ಲಿ ೪.೦೦ ಎಕರೆ ಜಮೀನನ್ನು ಶ್ರೀ ವಿ. ರಾಮುರವರಿಗೆ ಸಕ್ರಮಗೊಳಿಸಲಾಗಿದೆ. ಕಂದಾಯ ಇಲಾಖೆಯಿಂದ ಮಂಜೂರಿದಾರರಿಗೆ ಅನ್ಯಾಯವಾಗಿರುವುದಿಲ್ಲ. ಶ್ರೀ ರಾಮುರವರು ಅವರಿಗೆ ಮಂಜೂರಿಯಾಗಿರುವ ಜಮೀನಿನ ಸ್ವಾಧೀನಾನುಭವದಲ್ಲಿರುತ್ತಾರೆ. ಹಾಗೂ ಇತರೆಯವರಿಗೆ ಮಂಜೂರಿಯಾಗಿರುವ ಜಮೀನನ್ನು ಅತಿಕ್ರಮಿಸಿರುತ್ತಾರೆ. ಶ್ರೀ ರಾಮುರವರ ರಿವಿಷನ್ ಅರ್ಜಿ ಕರ್ನಾಟಕ ಮೇಲ್ಮನವಿ ನ್ಯಾಯಾಧೀಕರಣದ ಸಮ್ಮುಖದಲ್ಲಿ ತೀರ್ಪಿಗೆ ಬಾಕಿ ಇರುವುದರಿಂದ ಈ ಹಂತದಲ್ಲಿ ಸರ್ಕಾರ ಯಾವ ಕ್ರಮವನ್ನು ತೆಗೆದುಕೊಳ್ಳಲು ಸಾಧ್ಯವಿರುವುದಿಲ್ಲ.

ಶಾಸನ ರಚನಾ ಕಾರ್ಯಕಲಾಪಗಳು

೧೯೯೨ರ ಕರ್ನಾಟಕ ಭೂ ಸುಧಾರಣೆ (ತಿದ್ದುಪಡಿ) ವಿಧೇಯಕ

ಮಂಡನೆಗೆ ಅನುಮತಿಗಾಗಿ ಕೋರಿಕೆ

ಶ್ರೀ ಜಿ. ಪುಟ್ಟಸ್ವಾಮಿಗೌಡ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):- ಮಾನ್ಯ ಅಧ್ಯಕ್ಷರೇ, ೧೯೯೨ನೇ ಕರ್ನಾಟಕ ಭೂ ಸುಧಾರಣೆ (ತಿದ್ದುಪಡಿ) ವಿಧೇಯಕವನ್ನು ಕಂದಾಯ ಸಚಿವರ ಪರವಾಗಿ ಸಭೆಯ ಮುಂದೆ ಮಂಡಿಸಲು ತಮ್ಮ ಅನುಮತಿಯನ್ನು ಕೋರುತ್ತೇನೆ.

ಉಪಾಧ್ಯಕ್ಷಣಿಯವರು:- ಪ್ರಸ್ತಾವ ಏನೆಂದರೆ ''೧೯೯೨ರ ಕರ್ನಾಟಕ ಭೂ ಸುಧಾರಣೆ (ತಿದ್ದುಪಡಿ) ವಿಧೇಯಕವನ್ನು ಮಂಡಿಸಲು ಅನುಮತಿ ನೀಡುವುದು''.

<u>ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಂಡನೆಗೆ ಅನುಮತಿ ನೀಡಲಾಯಿತು.</u>

ಶ್ರೀ ಜಿ. ಪುಟ್ಟಸ್ವಾಮಿಗೌಡ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):- ಮಾನ್ಯ ಉಪಾಧ್ಯಕ್ಷಣಿಯವರೇ, ೧೯೯೨ನೇ ಕರ್ನಾಟಕ ಭೂ ಸುಧಾರಣೆ (ತಿದ್ದುಪಡಿ) ವಿಧೇಯಕವನ್ನು ಕಂದಾಯ ಸಚಿವರ ಪರವಾಗಿ ಸಭೆಯ ಮುಂದೆ ಮಂಡಿಸುತ್ತೇನೆ.